ಓ.ಎಸ್. ನಂ. **76/2019** ಡಿ.ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿನಾಂಕ **9.9.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನಾನು ಬಿ.ಇ. ಪದವೀದರನಾಗಿರುತ್ತೇನೆ. ನನ್ನ ತಾಯಿಯ ತಂದೆ ಹೆಸರು ಪಳನಿಯಪ್ಪನ್ ಎಂದರೆ ಸರಿ. ಅವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರು ಸರಸ್ವತಿ, ವಿಜಯಲಕ್ಷ್ಮಿ (ನನ್ನ ತಾಯಿ) ಮತ್ತು ನಲ್ಲಸ್ವಾಮಿ ಎಂದರೆ ಸರಿ. ನನ್ನ ತಂದೆ ಸುಮಾರು 8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಾನು ವಾದಪತ್ರದ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ತಾಯಿ ಮೇಲೆ ಎನ್.ಮುತ್ತುಸ್ವಾಮಿ ಅಲಿಯಾಸ್ ಕಾಳಿಯಣ್ಣನ್ ರವರು ದಾವೆ ಹೂಡಿರುತ್ತಾರೆ. ಅವರು ಕೆ.ಎಡತೊರೆ ಗ್ರಾಮದ ಹಳೆ ಸರ್ವೆ ನಂ.45/39 ಹೊಸ ಸರ್ವೆ ನಂ.231 ಕ್ಕೆ ಸಂಬಂಧಪಟ್ಟಂತೆ ದಾವೆ ಹೂಡಿರುತ್ತಾರೆ. ಹಳೆ ಸರ್ವೆ ನಂಬರನ್ನು ವಾದಪತ್ರದಲ್ಲಿ ನಮೂದು ಮಾಡಿರುವುದನ್ನು ನೋಡಿರುತ್ತೇನೆ. ಸದರಿ ಸ್ವತ್ತು ಎನ್.ಮುತ್ತುಸ್ವಾಮಿ ಬಿನ್ ನೈನಾ ಗೌಂಡರ್ ರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಎನ್.ಮುತ್ತುಸ್ವಾಮಿ ರವರು ನಮ್ಮ ಮನೆಯಲ್ಲಿ ಸಣ್ಣ ವಯಸ್ಸಿನಿಂದ ಜೀತಕ್ಕೆ ನಮ್ಮ ಮನೆಯಲ್ಲಿ ಇದ್ದರು. ಸದರಿ ಎನ್.ಮುತ್ತುಸ್ವಾಮಿ ರವರು ನನ್ನ ತಾಯಿ ಹೆಸರಿಗೆ ಮಾಲೀಕತ್ವ ವರ್ಗಾವಣೆ ಮಾಡಲು ನೋಂದಾಯಿತ ದಾಖಲೆಯಾಗಿ ಯಾವುದನ್ನು ಬರೆದು ಕೊಟ್ಟಿರುವುದಿಲ್ಲ. ಆದರೆ ಮೌಖಿಕವಾಗಿ ಹೇಳಿ ನನ್ನ ತಾಯಿಗೆ ವರ್ಗಾವಣೆ ಮಾಡಿಕೊಟ್ಟಿರುತ್ತಾರೆ.

ಎನ್.ಮುತ್ತುಸ್ವಾಮಿ ರವರಿಗೆ ದಿನಾಂಕ 2.8.2004 ರಲ್ಲಿ ಸಾಗುವಳಿ ಚೀಟಿ ನೀಡಲಾಗಿರುತ್ತದೆ. ನವೆಂಬರ್ ಅಥವಾ ಡಿಸೆಂಬರ್ 2004 ರಲ್ಲಿ ನನ್ನ ತಾಯಿ ಹೆಸರಿಗೆ ಹೇಳಿಕೆ ಮೇರೆಗೆ ಖಾತೆ ವರ್ಗಾವಣೆಯಾಗಿರುತ್ತದೆ. ಸದರಿ ಸ್ವತ್ತಿನ ಖಾತೆ ಮಾತ್ರ ನಮ್ಮ ಹೆಸರಿಗೆ ಇರುತ್ತದೆ. ನಿಡಿ4 ರಲ್ಲಿ ದಾವಾಸ್ವತ್ತನ್ನು 15 ವರ್ಷಗಳು ಪರಭಾರೆ ಮಾಡಬಾರದು ಎಂದು ಷರತ್ತನ್ನು ವಿಧಿಸಲಾಗಿದೆ ಎಂದರೆ ಸರಿ. ಸದರಿ ಷರತ್ತು ಇರುವ ಕಾರಣ ಎನ್.ಮುತ್ತುಸ್ವಾಮಿ ಸದರಿ ಸ್ವತ್ತನ್ನು ನನ್ನ ತಾಯಿ ಹೆಸರಿಗೆ ವರ್ಗಾವಣೆ ಮಾಡಲು ಆಗುವುದಿಲ್ಲ, ಆ ಕಾರಣ ನನ್ನ ತಾಯಿ ಮಾಲೀಕರಾಗುವುದಿಲ್ಲ ಎಂದರೆ ಗೊತ್ತಿಲ್ಲ ಎನ್ನುವರು. ನನ್ನ ತಾಯಿ ಹೆಸರಿಗೆ ದಾನಪತ್ರ ಎನ್.ಮುತ್ತುಸ್ವಾಮಿ ರವರು ಬರೆದುಕೊಟ್ಟಿರುತ್ತಾರೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳಲ್ಲಿ ಸ್ವತ್ತು ನನ್ನ ತಾಯಿ ಹೆಸರಿಗೆ ವಿಭಾಗ ಮೂಲಕ ಬಂದಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಎನ್.ಮುತ್ತುಸ್ವಾಮಿ ರವರು ತಮಿಳುನಾಡಿನಲ್ಲಿರುವ ತನ್ನ ತಾಯಿ ಮತ್ತು ತಂದೆ ರವರ ಜೊತೆ ವಾಸ ಮಾಡಲು ಹೋಗುತ್ತೇನೆ ಎಂದು ಹೇಳಿ,ಆ ಕಾರಣ ದಾವಸ್ವತ್ತನ್ನು ನನ್ನ ತಾಯಿಗೆ ಖಾತೆ ವರ್ಗಾವಣೆ ಮಾಡಿಸಿ ಹೋಗಿರುತ್ತಾರೆ. ವಾದಿ ನಮ್ಮ ಬಳಿ ಇರುವ ದಾಖಲೆಯನ್ನು ಹಾಜರುಪಡಿಸಲು ನಮಗೆ ನೋಟಿಸ್ ನೀಡಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ನೋಟಿಸ್ ನೀಡಿರುವುದಿಲ್ಲ ಎನ್ನುವರು.

ನಾನು ಹುಟ್ಟಿದ ದಿನದಿಂದಲೂ ವಾದಿ ನನಗೆ ಪರಿಚಯವಿರುತ್ತಾರೆ. ವಾದಿ ಚಿಕ್ಕಪಡುವನಕೋಟೆ ಗ್ರಾಮಸ್ಥರು. ವಾದಿ ತಂದೆ ಹೆಸರು ನೈನಾಗೌಂಡರ್. ನನ್ನ ತಾಯಿಗೆ ದಾವಾಸ್ವತ್ತನ್ನು ಬರೆದುಕೊಟ್ಟಿರುವ ವ್ಯಕ್ತಿಯ ಹೆಸರು ಸಹ ನೈನಾಗೌಂಡರ್. ವಾದಿ ಮತ್ತು ನನ್ನ ತಾಯಿಗೆ ಖಾತೆ ವರ್ಗಾವಣೆ ಮಾಡಿಕೊಟ್ಟ ಮುತ್ತುಸ್ವಾಮಿ ಬೇರೆ ಬೇರೆ ವ್ಯಕ್ತಿಯಾಗಿರುತ್ತಾರೆ. ನನ್ನ ತಾಯಿಗೆ ಸ್ವತ್ತನ್ನು ವರ್ಗಾವಣೆ ಮಾಡಿಕೊಟ್ಟ ಮುತ್ತುಸ್ವಾಮಿ ರವರನ್ನು ನ್ಯಾಯಾಲಯದ ಮುಂದೆ ಕರೆದುಕೊಂಡು ಬರಬಹುದಾ ಎಂದರೆ ಸಾಕ್ಷಿ ಆಗುವುದಿಲ್ಲ ಎನ್ನುವರು. ನನ್ನ ತಾಯಿಗೆ ಸ್ವತ್ತನ್ನು ವರ್ಗಾವಣೆ ಮಾಡಿರುತ್ತಾರೆ ಎಂದುಹೇಳುವ ಮುತ್ತುಸ್ವಾಮಿ ಮತ್ತು ನ್ಯಾಯಾಲಯದ ಮುಂದಿರುವ ವಾದಿ ಒಬ್ಬರೇ ಆಗಿರುತ್ತಾರೆ, ಆ ಕಾರಣ ನಾನು ಬೇರೆ ಮುತ್ತುಸ್ವಾಮಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ಮುತ್ತುಸ್ವಾಮಿ ರವರ ಭಾವಚಿತ್ರ ನಮ್ಮ ಬಳಿ ಇರುವುದಿಲ್ಲ. ಮುತ್ತುಸ್ವಾಮಿ ರವರು ನಮ್ಮ ಬಳಿ ಜೀತಕ್ಕಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಲಾಗುವುದಿಲ್ಲ. ಮುತ್ತುಸ್ವಾಮಿ ರವರ ಮೂಲ ವಿಳಾಸ ಸಹ ನನಗೆ ಗೊತ್ತಿರುವುದಿಲ್ಲ. ಮುತ್ತುಸ್ವಾಮಿ ರವರ ತಂದೆಯಾದ ನೈನಾಗೌಂಡರ್ ರವರು ಜೀವಂತವಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯ ತಂದೆ ನೈನಾಗೌಂಡರ್ ರವರು ಮೃತಪಟ್ಟಿರುತ್ತಾರೆ. ವಾದಿ ಮುತ್ತುಸ್ವಾಮಿ ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡು ನಮಗೆ ಮೋಸ ಮಾಡುತ್ತಿದ್ದಾರೆ ಎಂದು ಹೇಳಿ ಪೋಲಿಸರಿಗೆ ಯಾವುದೇ ದೂರು ನೀಡಿರುವುದಿಲ್ಲ.

ವಾದಿ ಮತ್ತು ನನ್ನ ತಂದೆ ಸ್ನೇಹಿತರಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನನ್ನ ಸ್ವಂತ ಅತ್ತೆ ಮಗ, ಆ ಕಾರಣ ಅವರ ಪರಿಚಯ ನನಗೆ ಇದೆ. ಲಿಖಿತ ಹೇಳಿಕೆಯಲ್ಲಿ ವಾದಿ ನನ್ನ ಅತ್ತೆ ಮಗ ಎಂದು ತಿಳಿಸಿರುತ್ತೇನೆ. ಲಿಖಿತ ಹೇಳಿಕೆಯಲ್ಲಿ ವಾದಿ ಯಾರೆಂದು ನಮಗೆ ಗೊತ್ತಿರುವುದಿಲ್ಲ ಎಂದು ನನ್ನ ತಾಯಿ ತಿಳಿಸಿರುವ ಬಗ್ಗೆ ಗೊತ್ತಿಲ್ಲ. ವಾದಿ ಮುತ್ತುಸ್ವಾಮಿ ಎಂದು ಹೇಳಿ ಬೇರೆಯವರಿಗೆ ಮೋಸ ಮಾಡಿರುವ ಪ್ರಸಂಗ ಇರುವುದಿಲ್ಲ. ಆತ ಈ ಕೇಸು ಸಲ್ಲಿಸುವ ಸಲುವಾಗಿ ಮಾತ್ರ ಮುತ್ತುಸ್ವಾಮಿ ಎಂದು ಹೇಳಿಕೊಳ್ಳುತ್ತಿದ್ದಾನೆ. ದಾವಾಆಸ್ತಿ ವಾದಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ ತಮಿಳನಾಡಿನಲ್ಲಿ ಟೀ ಅಂಗಡಿ ನಡೆಸುತ್ತಿದ್ದಾನೆ ಎಂದರೆ ಸರಿ. ವಾದಿ ತಮಿಳುನಾಡಿನಲ್ಲಿ ಹೆಚ್ಚಿನ ಸಮಯ ಇರುವ ಕಾರಣ ದಾವಾಸ್ವತ್ತನ್ನು ನೋಡಿಕೊಳ್ಳಲು ನನ್ನ ತಂದೆಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಸ್ವತ್ತನ್ನು ಸರ್ವೆ ಮಾಡಿಸಲು ಮತ್ತು ವಿದ್ಯುತ್ ಸಂಪರ್ಕ ಪಡೆಯುವ ಸಲುವಾಗಿ ಮೂಲ ದಾಖಲೆಗಳನ್ನು ನನ್ನ ತಂದೆಗೆ ನೀಡಿರುತ್ತಾರೆ ಹಾಗೂ ಕೆಲವು ಛಾಪಾಕಾಗದ ಮತ್ತು ಖಾಲಿ ಹಾಳೆಗೆ ಸಹಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖಾಲಿ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ನನ್ನ ತಾಯಿ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಖಾಲಿ ಛಾಪಾಕಾಗದವನ್ನು ದುರುಪಯೋಗಪಡಿಸಿಕೊಂಡು ನಿಡಿ7 ನ್ನು ಹಾಗೂ ಖಾಲಿ ಕಾಗದವನ್ನು ದುರುಪಯೋಗಪಡಿಸಿಕೊಂಡು ನಿಡಿ8 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಮುತ್ತುಸ್ವಾಮಿ ನನ್ನ ಸ್ವಂತ ತಮ್ಮ ಎಂದು ಹೇಳಿ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.